PW-1

ಇಂದು ದಿ.23-09-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀಸವಾಲುಃ-** ಎದುರುದಾರರ ಪರ ಶ್ರೀ ಕೆ ಜಿ ಕೆ ಎಸ್ ವಕೀಲರಿಂದ.

ಅಕ್ಕಮಹಾದೇವಿ ಪ್ರೌಢಶಾಲೆ , ಹೊನ್ನಾಳಿ ಯ ಮುಖ್ಯೋಪಾಧ್ಯಯರ ಮೇಲೆ ವಿಚಾರಣೆಯಾಗಿದೆ. ಸದರಿ ವಿಚಾರಣೆಗೆ ಸಂಬಧಪಟ್ಟ ನಡುವಳಿಕೆಗಳನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ವಿಚಾರಣೆಗೆ ಭಾಗವಹಿಸಿರುತ್ತೇನೆ. ಆದರೆ ನಡುವಳಿಕೆಗೆ ಭಾಗವಹಿಸಿಲ್ಲ. ವಿಚಾರಣಾ ಸಮಯದಲ್ಲಿ ವಿಚಾರಣಾಧಿಕಾರಿ ಹಾಗೂ ಅವರ ಸಿಬ್ಬಂದಿ , ಸದರಿ ಶಾಲೆಯ ಮುಖೋಪಾಧ್ಯಾಯರು ಮತ್ತು ನಾನು ಭಾಗವಹಿಸಿದ್ದೇವು. ಸದರಿ ವಿಚಾರಣೆಯಲ್ಲಿ ನನ್ನ ಹೇಳಿಕೆಯನ್ನು ದಾಖಲು ಮಾಡಿಲ್ಲ, ಅದರೆ ಮುಖ್ಯೋಪಧ್ಯಾಯರ ಹೇಳಿಕೆ ದಾಖಲು ಮಾಡಿಕೊಂಡಿದ್ದಾರೆ. ಸದರಿ ಮುಖ್ಯೋಪಾಧ್ಯಾಯರ ಪಾಟೀಸವಾಲನ್ನು ನಾನು ಮಾಡಿರುತ್ತೇನೆ. ಆ ಎಲ್ಲಾ ವಿಚಾರಣೆಗಳನ್ನು ನಡುವಳಿಕೆ ರೂಪದಲ್ಲಿ ತಯಾರು ಮಾಡಿ , ವರದಿ ಕೊಟ್ಟಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ನಡುವಳಿಕೆಯನ್ನು ಸಾಕ್ಷಿಗೆ ತೋರಿಸಿ , ಅದರಲ್ಲಿ ನಾನು ಹಾಜರಿದ್ದು , ಸಹಿ ಮಾಡಿದ್ದು , ದಿನಾಂಕ ಸಹ ನಮೂದು ಮಾಡಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಸದರಿ ನಡುವಳಿಕೆಯನ್ನು ಸಾಕ್ಷಿಗೆ ತೋರಿಸಿ ಸದರಿ ದಾಖಲೆಯನ್ನು ಓದಿ ಯಾವ ದಾಖಲೆ ಇರುತ್ತದೆ ಎಂದು ಹೇಳಲು ಆಗುತ್ತದೆಯೇ ಎಂದು ಕೇಳಲಾಗಿ ಸಾಕ್ಷಿ ಸದರಿ ದಾಖಲೆಯನ್ನು ಸಾಕ್ಷಿ ಓದದೇ ನೋಡದೇ ಹೇಳಲು ಆಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಮುಖ್ಯೋಪಾಧ್ಯಯರನ್ನು ನಾನು ಪಾಟೀಸವಾಲು ಮಾಡಿದ್ದು, ಆ ಸಮಯದಲ್ಲಿ ಅವರಿಗೆ ಯಾವ ಯಾವ ಪ್ರಶ್ನೆಗಳನ್ನು ಕೇಳಿರುತ್ತೇನೆ ಅಂತಾ ಈಗ ನನಗೆ ಹೇಳಲು ಆಗುವುದಿಲ್ಲ. ನಾನು ಮುಖ್ಯೋಪಾಧ್ಯಯರಿಗೆ 18 ಪ್ರಶ್ನೆಗಳನ್ನು ಕೇಳಿದ್ದು ,ಅದರಲ್ಲಿ 18 ನೇ ಪ್ರಶ್ನೆಯಲ್ಲಿ - ಸೌಮ್ಯ ಶ್ರೀ ಇವರು ನಿಮ್ಮ ಶಾಲೆಯಲ್ಲಿ ಅತಿಥಿ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಕೇಳಿದ್ದೇನೆ ಎಂಬ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಕೇಳಿದ ಪ್ರಶ್ನೆಗೆ ಮುಖ್ಯೋಪಾಧ್ಯಾಯರು ಆ ಹೆಸರಿನ ಮಹಿಳೆ ನಮ್ಮ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿಲ್ಲ ಅಂತಾ ಉತ್ತರ ನೀಡಿರುತ್ತಾರೆ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ಮಾಹಿತಿ ಹಕ್ಕು ಅಡಿ ನಾನು ಅರ್ಜಿ

ಸಲ್ಲಿಸಿದ್ದು, ಅದಕ್ಕೆ ಸಂಬಧಪಟ್ಟಂತೆ ವಿಚಾರಣೆಯಾಗಿದ್ದು , ನಂತರ ನಡುವಳಿಕೆಗಳು ನಡೆದಿದ್ದು , ಆ ನಡುವಳಿಕೆಗಳ ಪ್ರತಿಯನ್ನು ನಾನು ಪಡೆಯಲು ಪ್ರಯತ್ನಿಸಿದೆ , ಆದರೆ ಕೊಟ್ಟಿರುವುದಿಲ್ಲ. ಸದರಿ ನಡುವಳಿಕೆ ದಾಖಲೆ ಪಡೆಯಲು ನಾನು ಸಲ್ಲಿಸಿದ ಅರ್ಜಿಯ ದಿನಾಂಕ ತಿಂಗಳು ಇಸ್ವಿ ನೆನಪಿಲ್ಲ. ನಾನು ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಈ ಕೇಸಿನಲ್ಲಿ ಹಾಜರುಪಡಿಸಿಲ್ಲ. ಆ ಅರ್ಜಿ ನನ್ನ ಬಳಿ ಕಳೆದುಹೊಗಿರುವುದರಿಂದ ಹಾಜರುಪಡಿಸಲು ಆಗಜುವುದಿಲ್ಲ.

ದಿ.25-11-2022 ರಂದು ಆದ ವಿಚಾರಣಾ ನಡುವಳಿಕೆಯನ್ನು ನಾನು ಒಪ್ಪಿಕೊಂಡರೆ ಪ್ರಕರಣ ನನ್ನಗೆ ವಿರುದ್ದವಾಗುತ್ತದೆ ಎಂಬ ಕಾರಣಕ್ಕೆ ದಾಖಲೆಯನ್ನು ನಾನು ನೋಡದೇ ಓದದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಈ ಮೇಲ್ಮನವಿಯಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನಾನು ಈ ಮೊದಲು ವಿಚಾರಣ ನ್ಯಾಯಾಲಯದಲ್ಲಿ ನಡೆಪಿಯುತ್ತಿರುವ ಕ್ರಿಮಿನಲ್ ಮಿಸ್ ನಂ.406/14 ರಲ್ಲಿ ಹಾಜರುಪಡಿಸಿರುತ್ತೇನೆ ಎನ್ನುವುದು ಸುಳ್ಳು. ಸದರಿ ದಾಖಲೆಗಳನ್ನು ಹಾಜರುಪಡಿಸಿದ್ದರೂ ಸಹ ಹಾಜರುಪಡಿಸಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ವಿಚಾರಣಾ ನ್ಯಾಯಾಲಯದಲ್ಲಿ ಪ್ರತಿ ತಿಂಗಳು ರೂ.7000/- ಜೀವನಾಂಶ ಕೊಡಲು ಆದೇಶವಾಗಿತ್ತು. ಸದರಿ ಆದೇಶದ ಪ್ರಕಾರ ನಾನು ಎದುರುದಾರರಿಗೆ ಪ್ರತಿ ತಿಂಗಳು ಜೀವನಾಂಶ ಕೊಡುತ್ತ ಬಂದಿರುತ್ತೇನೆ. ಜೀವನಾಂಶ ಕೊಡುತ್ತಿದ್ದ ಬಗ್ಗೆ ಹಣವನ್ನು ನಾನು ವಿಚಾರಣಾ ನ್ಯಾಯಾಲಯದಲ್ಲಿ ಪ್ರತಿ ತಿಂಗಳು ಕೊಡುತ್ತ ಬಂದಿರುತ್ತೇನೆ. ಆದೇಶದ ಪ್ರಕಾರ ಜೀವನಾಂಶದ ಹಣವನ್ನು ಎದುರುದಾರರಿಗೆ ನಾನು ಕೊಡದಿದ್ದರೂ ಸಹ ಕೊಡುತ್ತ ಬಂದಿರುತ್ತೇನೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಮೊದಲು ವಿಚಾರಣಾ ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳು, ಅದೇ ದಾಖಲೆಗಳನ್ನು ಈ ಮೇಲ್ಮನವಿಯಲ್ಲಿ ಹಾಜರುಪಡಿಸಿ, ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡುವ ಸಲುವಾಗಿ ದಾಖಲೆ ಹಾಜರುಪಡಿಸಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮೇಲ್ಮನವಿಯಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ಸೃಷ್ಟಿಸಿ , ಹಾಜರುಪಡಿಸಿ , ಆ ದಾಖಲೆಗಳ ಆಧಾರದಲ್ಲಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.